**ದಿಃ 15-03-2021 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎ ಕ್ಯೂ ವಕೀಲರಿಂದ ಆರೋಪಿ ಪರಃ**

**7.** ಕರಾರುಪತ್ರ ಮತ್ತು ಪ್ರತಿಜ್ಞಾ ಪತ್ರದ ಮೇಲೆ ದಿಃ 08-05-2018 ಎಂದು ಇರುತ್ತದೆ. ಪಿರ್ಯಾದಿ ಮತ್ತು ಲೀಗಲ್ ನೋಟೀಸಿನಲ್ಲಿ ಕರಾರು ಪತ್ರ ಮತ್ತ ಪ್ರತಿಜ್ಞಾ ಪತ್ರದ ದಿನಾಂಕವನ್ನು 08-05-2019 ಎಂದು ನಮೂದಿಸಿದ್ದೇನೆ ಎಂದರೆ ಅದು ಪ್ರಿಂಟಿನಿಂದ ತಪ್ಪಾಗಿ ನಮೂದಾಗಿರುತ್ತದೆ. ಕರಾರು ಪತ್ರದ ಮೊದಲನೆ ಪುಟದಲ್ಲಿ ನನ್ನ ಸಹಿ ಏಕೆ ಇಲ್ಲ ಎಂದರೆ ಅವಶ್ಯಕತೆ ಇಲ್ಲದ ಕಾರಣ ಇರುವುದಿಲ್ಲ . ಕರಾರು ಪತ್ರವನ್ನು ತಯಾರಿಸಲು ಆರೋಪಿ ಮಾಹಿತಿ ಕೊಟ್ಟಿರುತ್ತಾನೆ. ಸದರಿ ಕರಾರು ಪತ್ರವನ್ನು ತುರಾಯಿದಾರ ವಕೀಲರ ಕಡೆಯಿಂದ ಆರೋಪಿ ಮಾಡಿಸಿಕೊಂಡಿರುತ್ತಾನೆ . ಸದರಿ ವಕೀಲರ ಕಚೇರಿ ಗುರುವಾರಪೇಟೆಯಲ್ಲಿ ಇರುತ್ತದೆ.

8. ಕರಾರು ಪತ್ರದಲ್ಲಿ ಸಾಕ್ಷಿ ಅಂತಾ ಸಹಿ ಮಾಡಿರುವಂತಹ ಸಂಶುದ್ದೀನ್ ದೇವಡಿ ಇವರ ಪರಿಚಯ ನನಗೆ ಇರುತ್ತದೆ. ಮತ್ತೆಬ್ಬ ಸಾಕ್ಷಿ ಆನಂದ ನಾಯಕರವರ ಪರಿಚಯ ಇರುತ್ತದೆ . ದೇವಡಿ ಇವರು ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ. ಆನಂದ ನಾಯಕ ಇವರು ಸೀಡ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ.

9. ಕರಾರುಪತ್ರ ಮತ್ತು ಪ್ರತಿಜ್ಞಾ ಪತ್ರದ ಮೇಲೆ ಇರುವ ಆರೋಪಿಯ ಸಹಿಗೂ ಮತ್ತು ಚೆಕ್ಕಿನ ಮೇಲಿರುವ ಆರೋಪಿತನ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿಜ್ಞಾ ಪತ್ರದ ಮೇಲಿರುವ ಅಕ್ಷರ ಯಾರದ್ದು ಎಂದರೆ ಹೇಳಲು ಬರುವುದಿಲ್ಲ.

10. ನಿಸಿ-8 ಡಿ.ಪಿ.ಗುಡಾಜ ಇವರ ಮುಂದೆ ನೋಟರಿಯಾಗಿರುತ್ತದೆ ಎಂದರೆ ಸರಿ. ಅದು ನೋಟರಿ ರಜಿಸ್ಟರನಲ್ಲಿ ನಮೂದು ಆಗಿಲ್ಲ ಎಂದರೆ ಸರಿ . ನಿಸಿ-8 ನ್ನು ಆರೋಪಿ ಮಾಡಿಸಿ ಕೊಟ್ಟಿರುತ್ತಾನೆ . ಕರಾರುಪತ್ರ ಮತ್ತು ಪ್ರತಿಜ್ಞಾ ಪತ್ರವನ್ನು ಆರೋಪಿ ಕೈಗಡ ರೂ .3 ಲಕ್ಷ ಸಾಲ ಪಡೆದಿದ್ದಕ್ಕಾಗಿ ಮಾಡಿ

ಕೊಟ್ಟಿರುತ್ತಾನೆ. ಸದರಿ ರೂ.3 ಲಕ್ಷ ರೂ.500 ಮುಖ ಬೆಲೆಯ ನೋಟಿನಿಂದ ಕೂಡಿದ್ದು. ಸದರಿ ರೂ.3 ಲಕ್ಷ ಗಳು ನನ್ನ ಉಳಿತಾಯದಿಂದ ಮನೆಯಲ್ಲಿ ಕೂಡಿಟ್ಟ ಹಣವಾಗಿತ್ತು . ನನ್ನ TATA SUMO ವಾಹನವನ್ನು ರೂ.1,85,000/- ಗೆ ಮಾರಿದ್ದೆ ಅದರಿಂದ ಬಂದ ಹಣವನ್ನು ಕೂಡಿಟ್ಟಿದ್ದೆ. ಸದರಿ TATA SUMO ನನ್ನ ತಂದೆಯ ಹೆಸರಿನಲ್ಲಿ ಇತ್ತು. ಉಳಿದ ಮೊತ್ತವನ್ನು ನನ್ನ ಸಂಬಳದಿಂದ ಕೂಡಿಟ್ಟಿರುತ್ತೇನೆ.

11. ನಿಸಿ-10 ದಿನಾಂಕಃ 23-09-2020 ರಿಂದ 07-11-2020 ರ ವರೆಗೂ ಮಾತ್ರ ಇರುತ್ತದೆ ಎಂದರೆ ಸರಿ. ಆರೋಪಿಗೆ ನಾನು ಸಾಲವನ್ನು 2018 ರಲ್ಲಿ ಕೊಟ್ಟಿರುತ್ತೇನೆ. 2018 ರಿಂದ 2019 ರ ವರೆಗೂ ಇರುವ ಬ್ಯಾಂಕ್ ಖಾತೆಯನ್ನು ನಾನು ಹಾಜರುಪಡಿಸಿಲ್ಲ. ಮೊದಲು ಕೊಟ್ಟ ರೂ.2 ಲಕ್ಷ ಹಣವನ್ನು ಆರೋಪಿ ಮರುಪಾವತಿಸದಿದ್ದರೂ ಯಾವ ಆಧಾರದ ಮೇಲೆ ಮತ್ತೊಮ್ಮೆ ರೂ.3 ಲಕ್ಷ ಕೊಟ್ಟಿರುತ್ತೇನೆ ಎಂದರೆ ಸ್ನೇಹವಿದ್ದ ಕಾರಣ ಕೊಟ್ಟಿರುತ್ತೇನೆ. 2018 ರಿಂದ ಆರೋಪಿ ಯಾವುದೇ ಮರುಪಾವತಿಯನ್ನು ಮಾಡಿರುವುದಿಲ್ಲ. ಕರಾರುಪತ್ರ ಮತ್ತು ಪ್ರತಿಜ್ಞಾ ಪತ್ರದ ಮೇಲೆ ಯಾವುದೇ ಸಿವಿಲ್ ದಾವೆಯನ್ನು ಹೂಡಿಲ್ಲ. ಚೆಕ್ಕಿನ ಮೇಲಿರುವ ದಿನಾಂಕದಂದು ಬೆಳಗ್ಗೆ ಆರೋಪಿತನು ಚೆಕ್ಕನ್ನು ಕೊಟ್ಟಿರುತ್ತಾನೆ . ಆರೋಪಿಯ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂದರೆ ಬಸ್ಸಸ್ಟಾಂಡದಲ್ಲಿ ಆರೋಪಿತನದ್ದು ಬಾಡಿಗೆ online center ಇರುತ್ತದೆ ಮತ್ತು ಅಂಬೇಡ್ಕರ ನಗರದಲ್ಲಿ ಸ್ವಂತ ಮನೆ ಇರುತ್ತದೆ. ಆರೋಪಿತನ online center ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿತನದ್ದು ತಿಂಗಳಿಗೆ ರೂ.50 ಸಾವಿರ ಆದಾಯ ಇರಬಹುದು. ಸದರಿ ಆದಾಯದ ಬಗ್ಗೆ ನನಗೆ ಮಾಹಿತಿ ಇರುತ್ತದೆ . ಆರೋಪಿತನ ಮನೆಯ ಪತ್ರಗಳನ್ನು ನಾನು ನೋಡಿರುವುದಿಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**Sd/-**

(ವೀರೇಶ್ ಕುಮಾರ್ ಸಿ.ಕೆ)

ಪ್ರ.ದಿ.&ನ್ಯಾ.ದಂ., ಗೋಕಾಕ.